ಉದಯವಾಣಿ






ಗುರುವಾರ, ಮಾರ್ಚ್ 29, 2001

ಪರಿಹಾರ ನಿಧಿ

ತಾಣ

- ಅಂಕಣ
- ಚಿತ್ರಲೇಖನ-ನುಡಿಚಿತ್ರ
- ನಿತ್ಯ ಪಂಚಾಂಗ
- ಗ್ರಹಗತಿ
- ಚಿತ್ರ - ವಿಚಿತ್ರ
- ಪುಸ್ತಕ ಪರಿಚಯ
- ಸಂಸ್ಕೃತಿ-ಸಾಹಿತ್ಯ-ಕಲೆ
- ಚಲನಚಿತ್ರ
- ಜಾಹೀರಾತು
- ವೈವಾಹಿಕ
- ಶ್ರದ್ಧಾಂಜಲಿ
- ಶೇರು ಮಾರುಕಟ್ಟೆ
- ಸ್ಥಳೀಯ ಮಾರುಕಟ್ಟೆ
- ಮುಂಬಯಿ ದರ್ಶನ
- ಸಂಪಾದಕರಿಗೆ ಪತ್ರ
- ಗಲ್ಫ್ ವಾರ್ತೆ
- ಕನ್ನಡ ನಾಡು ಸಂಪರ್ಕ
- ಸಂವಾದ

# ರಾಮ-ಸೀತೆ ನಿಂದಕರಿಗೆ ರಂಗನಾಥ ಶರ್ಮ ತರಾಟೆ



ಮಂಗಳೂರು, ಮಾ. 28: ಎಲ್ಲ ಸದ್ಗುಣಗಳಿಂದ ತುಂಬಿದವ ಹಾಗೂ ಮರ್ಯಾದಾ ಪುರುಷೋತ್ತಮನಾದ ವ್ಯಕ್ತಿಯನ್ನು ಚಿತ್ರಿಸಲು ವಾಲ್ಮೀಕಿ ರಾಮಾಯಣವನ್ನು ಬರೆದಿದ್ದಾರೆ. ಆದರೆ ಈಚೆಗೆ ಕೆಲವರ ವಿಮರ್ಶೆಯು ಅಡ್ಡದಾರಿ ಹಿಡಿದಿದ್ದು, ರಾಮಸೀತೆಯರಲ್ಲೇ ಅವರು ದೋಷ ಕಂಡಿದ್ದಾರೆ ಎಂದು ಬೆಂಗಳೂರಿನ ವಿದ್ವಾನ್ ಮಹಾ ಮಹೋಪಾಧ್ಯಾಯ ಎನ್. ರಂಗನಾಥ ಶರ್ಮ ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆನರಾ ಕಾಲೇಜಿನಲ್ಲಿ ಇಂದು ಏರ್ಯ ಲಕ್ಷ್ಮೀನಾರಾಯಣ ಆಳ್ವ ದತ್ತಿನಿಧಿಯಿಂದ ನೀಡಲಾದ ಏರ್ಯ ಪ್ರಶಸ್ತಿಯನ್ನ ವರು ಸ್ವೀಕರಿಸಿದರು. ಮಂಗಳೂರು ವಿಶ್ವ ವಿದ್ಯಾನಿಲಯದ ಕುಲಪತಿ ಪ್ರೊ। ಎಸ್. ಗೋಪಾಲ್ ಅವರು ಪ್ರಶಸ್ತಿ ಪ್ರದಾನ ಮಾಡಿ ಅಧ್ಯಕ್ಷತೆ ವಹಿಸಿದ್ದರು. ಸಂಸ್ಕೃತ, ಕನ್ನಡ ಭಾಷೆಗಳೆರಡೂ ತನಗೆ ಪ್ರಿಯವಾಗಿದ್ದು, ಸಂಸ್ಕೃತದಲ್ಲಿ ಕೃತಿ ರಚನೆಗಿಂತ ಹೆಚ್ಚಾಗಿ ಸಂಸ್ಕೃತ ಗ್ರಂಥಗಳನ್ನು ಕನ್ನಡಿಗರಿಗೆ ಪರಿಚಯಿಸುವ ಉದ್ದೇಶದಿಂದ ತಾನು ಕನ್ನಡದಲ್ಲಿ ಬರೆದೆ; ಮುಖ್ಯವಾಗಿ ವಾಲ್ಮೀಕಿ ರಾಮಾಯಣದ ಬಗ್ಗೆ ಬರೆದು ರಾಮಸೇವೆ ಮಾಡಿದೆ ಎಂದು ವಿದ್ವಾನ್ ಶರ್ಮ ಸ್ಮರಿಸಿಕೊಂಡರು.

ಬೆಂಗಳೂರಿನ ಪ್ರಾಧ್ಯಾಪಕ ಡಾ। ಎಂ. ಕೆ. ಶ್ರೀಧರ ಅವರು ರಂಗನಾಥ ಶರ್ಮರ ವಿದ್ವತ್ತು ಹಾಗೂ ಸಾಧನೆಗಳನ್ನು ಪರಿಚಯಿಸಿದರು. ಕೆನರಾ ಹೈಸ್ಕೂಲ್ ಎಸೋಸಿಯೇಶನ್ (ಕೆಎಚ್ಎಸ್ಎ) ವತಿಯಿಂದ ನೀಡಿದ ನೈತಿಕ ಮೌಲ್ಯ ಪುನರುತ್ಥಾನ ಪ್ರಶಸ್ತಿಯನ್ನು ಸ್ವೀಕರಿಸಬೇಕಿದ್ದ ಬೆಂಗಳೂರಿನ ಪ್ರೊ। ಎಸ್. ಕೆ. ರಾಮಚಂದ್ರ ರಾವ್ ಅವರು ಬಂದಿರಲಿಲ್ಲ.

ಕಾಲೇಜಿನ ಪ್ರಾಧ್ಯಾಪಕರಾದ ಪ್ರೊ। ಎಚ್. ರಮೇಶ ಕೆದಿಲಾಯರ ಲೇಖನಗಳ ಸಂಗ್ರಹ 'ಮನಸ್ಸು, ಕಾಲ ಇತ್ಯಾದಿ'ಯನ್ನು ಕುಲಪತಿ ಪ್ರೊ। ಗೋಪಾಲ್ ಬಿಡುಗಡೆ ಗೊಳಿಸಿದರು. ಪುಸ್ತಕದ ಕುರಿತು ಡಾ। ಪಿ. ಅನಂತಕೃಷ್ಣ ಭಟ್ ಹಾಗೂ ಲೇಖಕರು ಮಾತನಾಡಿದರು.






